ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ವರ್ಷಕ್ಕೊಂದು ಬಾರಿ ಆಹಾರ ಸುರಕ್ಷ ಮಾಹೆಯನ್ನು ಏರ್ಪಡಿಸುವ ಬಗ್ಗೆ

ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-

954(1009) ಮಾನ್ಯ ಆಹಾರ ಮತ್ತು ನಾಗರಿಕರ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪಡಿತರ ಚೀಟಿಗಳನ್ನು ಪರಿಶೀಲಿಸಿ ಅರ್ಹತೆಯುಳ್ಳವರಿಗೆ ಪಡಿತರ ಚೀಟಿಗಳನ್ನು ವಿತರಿಸಲು ಹಾಗೂ ಅರ್ಹತೆಯಿಲ್ಲದಿರುವ ಫಲಾನುಭವಿಗಳನ್ನು ಕೈಬಿಡುವಂತೆ ಸ್ಥಳೀಯ ಜಾಗೃತ ಸಮಿತಿಯಸದಸ್ಯರ ಸಹಕಾರದೊಂದಿಗೆ ಪ್ರತಿ ವರ್ಷ ವರ್ಷಕ್ಕೊಂದು ಬಾರಿ ಆಹಾರ ಸುರಕ್ಷಾ ಮಾಹೆ ನಡೆಯುತ್ತಿದೆಯೇ;

(ಆ) ನಡೆಯುತ್ತಿದ್ದಲ್ಲಿ, ಎಷ್ಟು ಜನ ಅನರ್ಹತೆಯುಳ್ಳ ಪಡಿತರ ಚೀಟಿಗಳನ್ನು ರದ್ದು ಪಡಿಸಲಾಗಿದೆ;

(ಇ) ಇನ್ನು ಎಷ್ಟು ಅನಧಿಕೃತ ಪಡಿತರ ಚೀಟಿಗಳನ್ನು ರದ್ದು ಪಡಿಸಲಾಗುವುದು;

(ಈ) ಈ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು)